2. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಣಿಬೆನ್ನೂರು ತಾಲ್ಲೂಕಿನಲ್ಲಿರುವ ಕೆರೆಗಳಲ್ಲಿ ಹೂಳೆತ್ತುವ ಬಗ್ಗೆ

166(1556) ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣಿಬೆನ್ನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 2000-2001ನೇ ಸಾಲಿನಲ್ಲಿ ರಾಣಿಬೆನ್ನೂರುತಾಲ್ಲೂಕಿನಲ್ಲಿರುವ ಯಾವ ಯಾವ ಕೆರೆಗಳಲ್ಲಿ ಹೂಳೆತ್ತುವ ಕಾರ್ಯವನ್ನು ಕೈಗೊಂಡಿದ್ದೀರಿ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಆರ್ಥಿಕ ಲಭ್ಯತೆಯನ್ನು ಆಧರಿಸಿ ಸಾಧ್ಯವಾದಷ್ಟು ಕೆರೆಗಳ ಹೂಳೆತ್ತಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಆರ್ಥಿಕ ಲಭ್ಯತೆಯನ್ನಾಧರಿಸಿ ಸಾಧ್ಯವಾದಷ್ಟು ಕೆರೆಗಳ ಹೂಳೆತ್ತಲು ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಕೆರೆಗಳಲ್ಲಿ ಹೂಳೆತ್ತುವ ಪ್ರಶ್ನೆ ಬಹಳ ಗಂಭೀರವಾದ ಪ್ರಶ್ನೆ. ಹೊಸ ಕೆರೆಗಳನ್ನು ನಾವು ಕಟ್ಟಲಿಕ್ಕಾಗುವುದಿಲ್ಲ. ಈ ಹೂಳೆತ್ತುವ ಸಲುವಾಗಿ ಈ ವರ್ಷ ಆರ್ಥಿಕ ಲಭ್ಯತೆ ಎಷ್ಟಿದೆ ಎಂದು ಹೇಳಬೇಕು ಮತ್ತು ಈ ಕಾರ್ಯ ಯಾವಾಗ ಪ್ರಾರಂಭವಾಗುತ್ತದೆ ಎಂದು ಹೇಳಬೇಕು. ತಮ್ಮ ಕಾರ್ಯ ಕ್ರಮದಲ್ಲಿ ಈ ಹೂಳೆತ್ತುವ ಕೆಲಸ ರೈತರು ಮಣ್ಣನ್ನು ತೆಗೆದುಕೊಂಡು ಹೋದಾಗ ಮಾತ್ರ ಆ ರೀತಿ ಹೂಳೆತ್ತುವ ಕಾರ್ಯವನ್ನು ತಾವು ಕೈಗೊಂಡಿದ್ದೀರಿ. ಕೆಲವೊಂದು ಕಡೆ ರೈತರುಗಳು ಈ ಮಣ್ಣನ್ನು ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿ ಯಾವ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಿ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಹೂಳೆತ್ತುವ ಕಾರ್ಯಕ್ರಮವನ್ನು ಬಹಳ ಬೃಹತ್ತಾದ ರೀತಿಯಲ್ಲಿ ಶುರುಮಾಡಬೇಕೆನ್ನುವ ನಿಟ್ಟಿನಲ್ಲಿ ವಿಶ್ವಬ್ಯಾಂಕ್ ಜೊತೆ ಮಾತನಾಡಿ ಒಂದು ಕಾರ್ಯಕ್ರಮವನ್ನು ರೂಪಿಸುತ್ತಿದ್ದೇವೆ. ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದರ ಬಗ್ಗೆ ಸುಮಾರು 25 ಸಾವಿರ ಕೆರೆಗಳ ಹೂಳೆತ್ತಿ ಸಂಪೂರ್ಣ ಅಭಿವೃದ್ಧಿ ಮಾಡುತ್ತೇವೆ ಎಂದು ಅವರೂ ಕೂಡ ಇಚ್ಛಿಸಿದ್ದಾರೆ. ನಿರ್ದಿಷ್ಟವಾಗಿ ಇವತ್ತು ಇಷ್ಟೇ ಹಣವನ್ನು ಈ ಕೆಲಸಕ್ಕೆ ಇಟ್ಟಿದ್ದೇವೆ ಎನ್ನುವ ಪಾದವನ್ನು ಇನ್ನು ಕೂಡ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ 16ನೇ ತಾರೀಖು ವಿಶ್ವಬ್ಯಾಂಕ್ ತಂಡದವರು ಬಂದು ಕರ್ನಾಟಕಾದ್ಯಂತ ಕೆಲವು ಜಾಗಗಳಿಗೆ ಹೋಗಿ ಅವರು ಇನ್ಸ್‌ಪೆಕ್ಷನ್ ಮಾಡಿಕೊಂಡು, ಆಮೇಲೆ 26ನೇ ತಾರೀಖು ಬೆಳಿಗ್ಗೆ ಒಂದು ಮೀಟಿಂಗ್ ಕರೆದಿದ್ದಾರೆ. ಅದರ ನಂತರ ಈ ನಿಟ್ಟಿನಲ್ಲಿ ಕಾರ್ಯಕ್ರಮ ರೂಪುಗೊಳ್ಳಬಹುದು ಎಂದು ಇದೆ ಹಾಗಾಗಿ ಈ ಕಾರ್ಯಕ್ರಮದ ಬಗ್ಗೆ ಅದಾದಮೇಲೆ ಹೇಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕೆ.ಬಿ. ಕೋಳಿವಾಡ್ : ನನ್ನ ಎರಡನೇ ಪ್ರಶ್ನೆಗೆ ಉತ್ತರ ಬರಲಿಲ್ಲ. ಕೆಲವೊಂದು ಪ್ರದೇಶದಲ್ಲಿ ಕೆರೆಗಳಿಂದ ರೈತರು ಮಣ್ಣನ್ನು ತೆಗೆದುಕೊಂಡು ಹೋಗಲಿಕ್ಕೆ ತಯಾರಿಲ್ಲ. ಅಲ್ಲಿ ಯಾವ ರೀತಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂದು ಹೇಳಬೇಕು.

ಶ್ರೀ ಕುಮಾರ್ ಬಂಗಾರಪ್ಪ : ಇದರ ಬಗ್ಗೆ ಕೋಲಾರ, ತುಮಕೂರು ಮತ್ತು ಧಾರವಾಡ ಇಂಥ ಜಾಗಗಳಲ್ಲಿ ರೈತರ ಸಹಕಾರದಿಂದ ಹೂಳೆತ್ತುವ ಕಾರ್ಯಕ್ರಮ ತಕ್ಕಮಟ್ಟಿಗೆ ಅದು ಯಶಸ್ವಿಯಾಗಿದೆ. ಆದರೆ ಕೆಲವು ಜಾಗಗಳಲ್ಲಿ ಅದು ಮಲೆನಾಡು ಭಾಗ ಇರಬಹುದು, ಕಪ್ಪುಮಣ್ಣು ಇರುವ ಜಾಗಗಳಲ್ಲಿ ಹೂಳನ್ನು ತೆಗೆದುಕೊಂಡು ಹೋಗಿ ಮತ್ತೆ ಗದ್ದೆಯಲ್ಲಿ ಹಾಕುವ ಪ್ರವೃತ್ತಿ ಇಲ್ಲದೇ ಇರುವುದರಿಂದ ಯಾವ ರೀತಿ ಕಾರ್ಯಕ್ರಮವನ್ನು ರೂಪುಗೊಳಿಸಬೇಕೆನ್ನುವ ವ್ಯವಸ್ಥೆಯನ್ನು ಇನ್ನೂ ಮಾಡಿಲ್ಲ ಬರುವ ಮಿಟಿಂಗ್‌ನಲ್ಲಿ ಚರ್ಚೆ ಮಾಡಿ ರಾಜ್ಯದ ಸಲಹಾ ಸಮಿತಿ ಜೊತೆ ಚರ್ಚೆಮಾಡಿ ಯಾವ ರೀತಿ ನಾವು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಯೋಚಿಸುತ್ತೇವೆ. ಏಕೆಂದರೆ ಕರಾವಳಿ ಪ್ರದೇಶಗಳಲ್ಲಿ ಒಂದು ರೀತಿ ಇದೆ. ಕರಾವಳಿ ಘಟ್ಟದ ಮೇಲುಗಡೆ ಒಂದು ವ್ಯವಸ್ಥೆ ಇದೆ. ಕಪ್ಪುಮಣ್ಣು ಇರುವ ಬಯಲುಸೀಮೆ ಕಡೆ ಒಂದು ವ್ಯವಸ್ಥೆ ಇದೆ. ನಮ್ಮ ಕೋಲಾರ ಭಾಗದಲ್ಲೂ ಒಂದು ರೀತಿ ಇದೆ. ಹಾಗಾಗಿ ಯಾವ ರೀತಿ ವ್ಯವಸ್ಥೆಗಳನ್ನು ಮಾಡಬೇಕೆಂದು ಯೋಚಿಸಿ ಆದಷ್ಟು ಬೇಗ ನಾವು ಆ ಕಾರ್ಯಕ್ರಮವನ್ನು ರೂಪುಗೊಳಿಸುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ್ : ರಾಣಿಬೆನ್ನೂರ್ ನಗರದಲ್ಲಿ ಒಂದು ಮಹಾ ದೊಡ್ಡ ಕೆರೆ ಇದೆ. ಆ ಕೆರೆ ಸಂಪೂರ್ಣವಾಗಿ ಹೂತುಹೋಗಿದೆ. ಆ ಹೂಳನ್ನು ನಾವು ಎತ್ತಿಸದೇ ಹೋದರೆ ಈಗಾಗಲೇ ರಾಣಿಬೆನ್ನೂರ್ ನಗರದಲ್ಲಿರುವ ಎಲ್ಲಾ ಬೋರ್‌ವೆಲ್‌ಗಳೂ ಒಣಗಿ ಹೋಗಿವೆ. ಅದು ಕುಡಿಯುವ ನೀರಿನ ಸಮಸ್ಯೆಗೂ ಸಂಬಂಧಪಟ್ಟಿದೆ. ಆದರೆ ಅಲ್ಲಿಯ ಮಣ್ಣನ್ನು ರೈತರು ತೆಗೆದುಕೊಂಡು ಹೋಗುವುದಕ್ಕೆ ಸಿದ್ಧರಿಲ್ಲ. ಅದು ಜಿಗುಟಾದ ಮಣ್ಣು. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿರುವುದೇನೆಂದರೆ ಆ ಕೆರೆಯ ಹೂಳನ್ನು ಎತ್ತಿಸುವ ಕೆಲಸವನ್ನು ಪ್ರಾರಂಭ ಮಾಡುತ್ತೀರಾ? ಆ ರೀತಿ ಮಾಡಿ ಅಲ್ಲಿಯ ಮಣ್ಣನ್ನು ಅಲ್ಲೇ ಒಡ್ಡಿಗೆ ಹಾಕಿ ಅದನ್ನು ಶೇಖರಣೆ ಮಾಡುವ ಕಾರ್ಯವನ್ನು ತಾವು ಕೈಗೊಳ್ಳುತ್ತೀರಾ?

ಶ್ರೀ ಕುಮಾರ್ ಬಂಗಾರಪ್ಪ : ರಾಣಿಬೆನ್ನೂರಿನ ಅಸುಂಡಿಕೆರೆ, ದೊಡ್ಡಕೆರೆ, ಬೆನಕಗೊಂಡನಕೆರೆ ಈ ರೀತಿ ಮೂರು ಕೆರೆಗಳು ಇವೆ. ಆ ಮೂರು ಕೆರೆಗಳಲ್ಲೂ ಹೂಳೆತ್ತಬೇಕಾಗಿದೆ. ಆದರೆ ಹಣದ ಲಭ್ಯತೆ ಇಲ್ಲದೇ ಇರುವುದರಿಂದ ಅದನ್ನು ಮಾಡುವುದಕ್ಕಾಗಿಲ್ಲ. ಅಲ್ಲಿ ಬಹಳ ಜಿಗುಟು ಮಣ್ಣಿದೆ ಎಂದು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ಇಂಜಿನಿಯರ್ ಜೊತೆ ಕುಳಿತು ಮಾತನಾಡಿ ಅವರು ಯಾವ ರೀತಿ ಸಲಹೆ ಕೊಡುತ್ತಾರೆ, ಆ ರೀತಿ ಮಾಡುತ್ತೇವೆ. ಏಕೆಂದರೆ, ಹೂಳೆತ್ತಿದ ಮೇಲೆ ಆ ಮಣ್ಣು ಮತ್ತೆ ಕೆರೆಗೆ ವಾಪಸ್ ಬರಬಾರದು. ಅದಕ್ಕಾಗಿ ಕಾರ್ಯಕ್ರಮವನ್ನು ಯಾವ ರೀತಿ ಮಾಡಬೇಕೆನ್ನುವ ಬಗೆಗೆ ತಕ್ಷಣ ಈ ವರ್ಷವೇ ಅದರ ಬಗ್ಗೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ್ : ಹೋದ ಸಾರಿ ಮೂರು ಕೆರೆ ತೆಗೆದುಕೊಂಡಿದ್ದರು. ಆದರೆ ರಾಣಿಬೆನ್ನೂರು ನಗರದ ಕೆರೆಯನ್ನು ತೆಗೆದುಕೊಂಡಿಲ್ಲ. ಬಹಳ ಅವಶ್ಯಕತೆ ಇದೆ; ಈ ವರ್ಷವಾದರೂ ಅದನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕುಮಾರ್ ಬಂಗಾರಪ್ಪ : ಈ ಸಾರಿ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಶ್ರೀ ಪ್ರಭಾಕರ ಬಂಗೇರಾ ಅವರದ್ದು.

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೆ, ನನಗೆ ಉತ್ತರವೇ ಬಂದಿಲ್ಲ.